# ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ನ್ಯಾಯಾಲಯ, ಹುಬ್ಬಳ್ಳಿ

**ಸಿಸಿ ನಂಃ 226 ಃ 2012**

ಪಿಡಬ್ಲೂ:7
ಸಿಡ್ಲೂ ಃ 17

| | |
|---|---|
| ಸಾಕ್ಷಿಯ ಹೆಸರು | ಃ ವಸಂತ |
| ತಂದೆಯ ಹೆಸರು | ಃ ವೀರಪ್ಪಾ ಇಟಿಗಟ್ಟಿ |
| ವಯಸ್ಸು | ಃ 74 ವರ್ಷ |
| ಉದ್ಯೋಗ | ಃ ನಿವೃತ್ತ ಜೆಇ ಎಚ್‌ಡಿಎಮ್‌ಸಿ ಧಾರವಾಡ |
| ವಾಸ ಸ್ಥಳ | ಃ ಧಾರವಾಡ |

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಃಕರಿಸಿದ ದಿನಾಂಕಃ 27-10-2016

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ

ನಾನು 1971 ರಲ್ಲಿ ಎಚ್‌ಡಿಎಮ್‌ಸಿ ಇಲಾಖೆಯಲ್ಲಿ ಟ್ರೆಸರ್ ಆಗಿ ನೇಮನೂಕನಾಗಿರುತ್ತೇನೆ. ಆ ನಂತರ ನಾನು ಡ್ರಾಸ್‌ಮೇನ್ ಹಾಗೂ ಜೆಇ ಆಗಿ ಬಡ್ತಿ ಹೊಂದಿದ್ದೆ . ನಾನು ಟ್ರೆಸರ್ ಅಂತಾ ಪಿಡಬ್ಲೂಡಿ ಖಾತೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೆ . ಚಾಸಾ-1 ರ ಪರಿಚಯವಿತ್ತು. ಶರಣಪ್ಪಾ ಎನ್ನುವವರು ವಾಟರ್ ಸಪ್ಲೈ ಸೆಕ್ಷೆನ್‌ನಲ್ಲಿ ಇದ್ದರು. ಕಾಮಗಾರಿ ಮೆಜರಮೆಂಟ್ ಪುಸ್ತಕವನ್ನು ಎಸ್‌ಡಿಸಿ ಹಾಗೂ ಎಇಇ ಅವರ ಹತ್ತಿರ ಇರುತ್ತಿತ್ತು. ನನ್ನಹತ್ತಿರ ಅಂತಹ ಯಾವುದೇ ಪುಸ್ತಕಗಳನ್ನು ಇಟ್ಟಿರಲಿಲ್ಲ. ನಾನು ಯಾವುದೇ ಎಮ್‌ಬಿ ಬುಕ್ಕನ್ನು ಯಾರಿಂದಲೂ ಪಡೆದುಕೊಂಡಿರುವುದಿಲ್ಲ ಮತ್ತು ಯಾರಿಗೂ ಕೊಟ್ಟಿರುವುದಿಲ್ಲ.

2. ಆ ಸಂದರ್ಭದಲ್ಲಿ 1 ರಿಂದ 3ನೇ ಆರೋಪಿತರು ಅಭಿಯಂತರರು ಆಗಿದ್ದರು. ಅದರಂತೆ 5 ರಿಂದ 7ನೇ ಆರೋಪಿತರು ಗೊತ್ತು , ಅವರು ಅಕೌಂಟ್ ಸೆಕ್ಷೆನ್‌ನಲ್ಲಿ ಕೆಲಸ ಮಾಡುತ್ತಿದ್ದರು. ಕಿ 8ನೇ ಆರೋಪಿತನ ಪರಿಚಯವಿಲ್ಲ. ಈ ಪ್ರಕರಣದಲ್ಲಿ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಚಾಸಾ- 1 ಗೊತ್ತು. ಆದರೆ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣ'ಸಿ ಪಾಟಿ ಸವಾಲು ಮಾಡಲು ಸಸಅ ಅವರು ಅನುಮತಿ ಕೋರಿರುತ್ತಾರೆ. ಪಂಚನಾಮೆಯನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಯಿತು)

<u>ಪಾಟೀ ಸವಾಲು ಎಪಿಪಿ ಯವರಿಂದಃ</u>

3. 1984 ರಲ್ಲಿ ಹುಬ್ಬಳ್ಳಿಯಿಂದ ಧಾರವಾಡ ಯುನಿಟ್‌ಗೆ ವರ್ಗಾವಣೆಗೊಂಡು ಪಿಡಬ್ಲೂಡಿ ಸೆಕ್ಷೆನ್‌ನಲ್ಲಿ ಚಾರ್ಜ ಪಡೆದುಕೊಂಡಿದ್ದೆ ಎಂದರೆ ಸರಿ . ಅಭಿವೃದ್ದಿ ಕಾಮಗಾರಿ ಕುರಿತು ನನಗೆ ಯಾವುದೇ ಜವಾಬ್ದಾರಿ ಇಲ್ಲ. ದಿನಾಂಕಃ 20–4–1998 ರಲ್ಲಿ ಪಿಡಬ್ಲೂಡಿ ಸೆಕ್ಷೆನ್ನಿನ ಶರಣಪ್ಪಾ ಎನ್ನುವವರು ನನಗೆ ಎಮ್‌ಬಿ ಬುಕ್ ನೀಡಿದ್ದರು ಎಂದರೆ ಸರಿ . ಅದರ ನಂಬರ 1292 ಆಗಿತ್ತು ಎಂದರೆ ಸರಿ . ಅದರಲ್ಲಿ ಕೆಲವೊಂದು ಪುಟಗಳು ಖಾಲಿ ಇದ್ದವು ಹಾಗೂ ಕೆಲವೊಂದು ಬರೆದಿದ್ದವು ಎಂದರೆ ಸರಿ. ಅದನ್ನೇ ನಾನು ಮುಂದುವರೆಸಿದ್ದೆ ಎಂದರೆ ಸರಿ . ಯಾವುದೇ ಬಿಲ್ ಪಾಸ್ ಮಾಡುವ ಸಂದರ್ಭದಲ್ಲಿ ಸಂಬಂಧಿತ ಎಮ್‌ಬಿ ಬುಕ್‌ಗಳು ದಾಖಲಾತಿಗಳೊಂದಿಗೆ ಕಳಿಸಿಕೊಡಲಾಗುತ್ತದೆ ಎಂದರೆ ಸರಿ . ನನ್ನ ಹತ್ತಿರ ಇದ್ದ ಎಮ್‌ಬಿ ಬುಕ್ ಅಕೌಂಟಗೆ ಹೋದ ನಂತರ ಮರಳಿ ಶರಣಪ್ಪಾ ರವರಿಗೆ ಹೋಗಿರುತ್ತದೆ.

4. ದಿನಾಂಕಃ 19–4–2000 ದಂದು ಚಾಸಾ–1 ಹಾಗೂ 1 ರಿಂದ 7ನೇ ಆರೋಪಿತರು 8ನೇ ಆರೋಪಿತರ ಮೂಲಕ 268 ಕಾಮಗಾರಿ ಕುರಿತು ಸುಳ್ಳು ಬಿಲ್ಲುಗಳನ್ನು ಪಡೆದುಕೊಂಡಿದ್ದರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಅದರ ಕುರಿತು ಚಾಸಾ–1 ದೂರು ನೀಡಿದ್ದರು ಎಂದರೆ ಸರಿಯಲ್ಲ. ಅದರಂತೆ ಸಾಕ್ಷಿಯ ಹೇಳಿಕೆಯ ಕೊನೆಯ ಕಂಡಿಕೆಯನ್ನು ಓದಿ ಹೇಳಲಾಗಿ ಹಾಗೇ ನಾನು ಹೇಳಿಕೆ ನೀಡಿರುವುದಿಲ್ಲ ಎಂದು ಹೇಳಿದ್ದು ಸದರಿ ಕಂಡಿಕೆಯನ್ನು ನಿಶಾನೆ ಪಿ–6 ಅಂತಾ ಗುರುತಿಸಲಾಯಿತು. ಸದರಿ ಹೇಳಿಕೆ ಕುರಿತು ಹಾಗೂ ಪ್ರಕರಣದ ಕುರಿತು ನನಗೆ ಎಲ್ಲ ವೈಯಕ್ತಿಕ ಮಾಹಿತಿ ಇದ್ದರೂ ಕೂಡಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿಸಿ ನಂಃ **226 ಃ 2012**
ಪಿಡಬ್ಲೂ ಃ7

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ</u>ಃ ಇಲ್ಲವೆಂದು ಹೇಳಿರುತ್ತಾರೆ.

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು )

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಹುಬ್ಬಳ್ಳಿ.